ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃರವರ ನ್ಯಾಯಾಲಯದಲ್ಲಿ,
ನ.ರಾ.ಪುರ.
<u>ಸಿ.ಸಿ. ನಂ ಃ**89/2025**</u>

| | | |
|---|---|---|
| ಸಾಕ್ಷಿದಾರರ ಹೆಸರು | ಃ ಸಿಜು | ಸಿ.ಡಬ್ಲ್ಯೂ - 01 |
| ತಂದೆಯ ಹೆಸರು | ಃ ಎಲಿಯಾಸ್ | ಪಿ.ಡಬ್ಲ್ಯೂ - 01 |
| ವಯಸ್ಸು | ಃ 39 ವರ್ಷ | |
| ಉದ್ಯೋಗ | ಃ ವ್ಯವಸಾಯ | |
| ವಾಸಸ್ಥಳ | ಃ ಕೆ ಕಣಬೂರು | |

ದಿನಾಂಕಃ **10/02/2026** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಃ ಮಾನ್ಯ ಎಪಿಪಿ ಯವರಿಂದ ಃಃ</u>

ಚಾಸಾ 2 ರಿಂದ 7 ರವರ ಪರಿಚಯವಿರುತ್ತದೆ. ದಿಃ 22/06/2025 ರಂದು ಮ.3.15 ಗಂಟೆಗೆ ನಾನು ಕಣಬೂರಿನ ಗೇಟ್ ಬಳಿ ಇದ್ದಾಗ ಸತೀಶ್ ಎನ್ನುವವರು ಫೋನ್ ಮಾಡಿ ಎನ್ ಆರ್ ಪುರದ ಕನ್ಯಾಕುಮಾರಿ ಹೋಟೆಲ್ ಹತ್ತಿರ ರಾಜೇಶ್ ರವರು ಓಮಿನಿ ಕಾರಿಗೆ ಬೊಲೆರೋ ಪಿಕ್ ಅಪ್ ವಾಹನ ಟಚ್ ಮಾಡಿದ್ದಾರೆ ಎಂದು ತಿಳಿಸಿದ್ದು, ಸದರಿ ಗಾಡಿಯ ಹಿಂದುಗಡೆ ಕುರುಬನ ರಾಣಿ ಎಂದು ಬರೆದಿದ್ದು, ಅದು ಬಂದರೆ ಅದನ್ನು ನಿಲ್ಲಿಸುವಂತೆ ನನಗೆ ಹೇಳಿದ್ದು, ನಾನು ಕಣಬೂರು ಕಡೆಯಿಂದ ಮುತ್ತಿನಕೊಪ್ಪಕ್ಕೆ ಬೈಕಿನಲ್ಲಿ ಬರುತ್ತಿರುವಾಗ ಮುತ್ತಿನಕೊಪ್ಪ ಫಜೀರೋ ಹೋಟೆಲ್ ಬಳಿ ಕುರುಬನ ರಾಣಿ ಎಂದು ಬರೆದಿದ್ದ ವಾಹನ ನಿಂತಿದ್ದು ನಾನು ಹೋಗಿ ನೋಡಲಾಗಿ ಅವರು ಹೋಟೆಲ್ ನಲ್ಲಿ ಊಟ ಮಾಡುತ್ತಿದ್ದು ನಂತರ ಅವರನ್ನು ವಾಹನ ಟಚ್ ಮಾಡಿದ ಬಗ್ಗೆ ಕೇಳಿ 5 ನಿಮಿಷ ನಿಲ್ಲುವಂತೆ ಹೇಳಿರುತ್ತೇನೆ. ಆಗ ಅವರು ನಿಲ್ಲದೇ ಹೋಗಲು ಪ್ರಯತ್ನ ಪಟ್ಟಾಗ ನಾನು ಸದರಿ ವಾಹನದ ಬಲಭಾಗದಲ್ಲಿ ವಾಹನ ನಿಲ್ಲಿಸಲು ಹೋದಾಗ ಅವರು ನನ್ನ ಕೈಯನ್ನು ಹಿಡಿದುಕೊಂಡು ಕಚ್ಚಿ ನನ್ನನ್ನು ಎಳೆದುಕೊಂಡು ಹೋಗಿರುತ್ತಾರೆ. ಆಗ ನನ್ನನ್ನು ಅವರು ಭದ್ರಾವತಿಯ ಕಾರೆಹಳ್ಳಿ ಬ್ರಿಡ್ಜ್ ತನಕ ಕರೆದುಕೊಂಡು ಹೋಗಿದ್ದು ಆಗ ಅಲ್ಲಿ ಬೋಲೊರೋ ಚಾಲಕನಾದ ಸಂದೀಪ ರವರು ಕೀ ಯಿಂದ ಮುಷ್ಟಿ ಮಾಡಿ ನನ್ನ ಹೊಟ್ಟೆಗೆ ಗುದ್ದಿರುತ್ತಾನೆ. ಆಗ ಅವರ ಜೊತೆ ಇದ್ದ ಒಬ್ಬ ವ್ಯಕ್ತಿ ಫೋನ್ ಮಾಡಿ ಉಳಿದವರನ್ನು ಕರೆಯಿಸಿದರು. ಆಗ ಅಲ್ಲಿ ಸಾರ್ವಜನಿಕರು ಸೇರಿ ನಂತರ ನಾನು ಎನ್ ಆರ್ ಪೊಲೀಸ್ ಠಾಣೆಗೆ ಬಂದು ಅಲ್ಲಿಂದ ಆಸ್ಪತ್ರೆಗೆ ಹೋಗಿ 2 ದಿನಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ.

2. ನಂತರ ದೂರು ಕೊಟ್ಟಿರುತ್ತೇನೆ. ದಿಃ 26/06/2025 ರಂದು ಮುತ್ತಿನಕೊಪ್ಪದ ಫಜೇರೋ ಹೋಟೆಲ್ ಬಳಿ ನಾನು ತೋರಿಸಿದ ಸ್ಥಳದಲ್ಲಿ ಚಾಸಾ 4 ಮತ್ತು 5 ರವರ ಸಮಕ್ಷಮ ಪೊಲೀಸರು ಪಂಚನಾಮೆಯನ್ನು ಮ.1.45 ರಿಂದ 4.30 ವರೆಗೆ ಮಾಡಿರುತ್ತಾರೆ. ಆ ಕಾಲಕ್ಕೆ ಭಾವಚಿತ್ರ ತೆಗೆದಿರುತ್ತಾರೆ. ಅದೇ ದಿನ ಭದ್ರಾವತಿಯ ಕಾರೆಹಳ್ಳಿ ಬ್ರಿಡ್ಜ್ ಬಳಿ ಪಂಚನಾಮೆಗೆ ಕರೆದುಕೊಂಡು ಹೋಗಿದ್ದು, ಆ ಕಾಲಕ್ಕೆ ನಾನು ಮತ್ತು ಚಾಸಾ 4 ಮತ್ತು 5 ರವರ ಸಮಕ್ಷಮ ಪೊಲೀಸರು ಪಂಚನಾಮೆ ಮಾಡಿದ್ದು ಆ ಕಾಲಕ್ಕೆ ಭಾವಚಿತ್ರವನ್ನು ತೆಗೆದಿರುತ್ತಾರೆ.

3. ದಿಃ 21/07/2025 ರಂದು ಪೊಲೀಸ್ ಠಾಣಾ ಆವರಣದಲ್ಲಿ ಕೆಎ 14 ಸಿ 7379 ಬೊಲೆರೋ ವಾಹನವನ್ನು ನಿಲ್ಲಿಸಿದ್ದು, ಸದರಿ ವಾಹನವನ್ನು ನಾನು ನೋಡಿ ಗುರುತಿಸಿರುತ್ತೇನೆ ಹಾಗೂ ಸದರಿ ಮಹಜರನ್ನು ಸಂಜೆ 7.00 ರಿಂದ 8.00 ಗಂಟೆ ಅವಧಿಯಲ್ಲಿ ವಿಪಿನ್ ಮತ್ತು ವರ್ಗೀಸ್ ಸಮಕ್ಷಮ ಮಾಡಿ ಆ ಕಾಲಕ್ಕೆ ಭಾವಚಿತ್ರ ತೆಗೆಯಲಾಗಿರುತ್ತದೆ. ಆ ದಿನ ನನಗೆ ಕೈ ಕಚ್ಚಿದ ವ್ಯಕ್ತಿ ಸಂದೀಪ ಇರುತ್ತಾನೆ.

4. ಸಾಕ್ಷಿಯು ತಾವು ನೀಡಿದ ದೂರನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 26/06/2025 ರಂದು ಮಾಡಿದ ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಎಂದು ಗುರುತಿಸಲಾಯಿತು. ನಿಪಿ 2 ಅನ್ನು ಮಾಡುವ ಕಾಲಕ್ಕೆ ತೆಗೆದ ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯ್ತು. ದಿಃ 21/07/2025 ರಂದು ಮಾಡಿದ ಅಮಾನತ್ತು ಮಹಜರನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಎಂದು, ಸಾಕ್ಷಿಯ ಸಹಿಯನ್ನು ನಿಪಿ 5(ಎ) ಎಂದು ಗುರುತಿಸಲಾಯಿತು. ನಿಪಿ 5 ಮಾಡುವ ಕಾಲಕ್ಕೆ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ 6 ಎಂದು, ಸಿ ಡಿ ಯನ್ನು ನಿಪಿ 7 ಎಂದು ಗುರುತಿಸಲಾಯ್ತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ ಹಾಗೂ ಬೊಲೆರೋ ಪಿಕ್ ಅಪ್ ವಾಹನದ ಭಾವಚಿತ್ರವನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ  ಮಾನ್ಯ ಎ ಪಿ ಪಿ ಯವರಿಂದಃ

ಭದ್ರಾವತಿ ಕಾರೆಹಳ್ಳಿ ಫ್ಲೈ-ಓವರ್ ಬ್ರಿಡ್ಜ್ ಕೆಳಗೆ ಹಲ್ಲೆ ಮಾಡುವ ಸಮಯದಲ್ಲಿ ಬೊಲೆರೋ ಚಾಲಕನ ಜೊತೆ ಇದ್ದ ವ್ಯಕ್ತಿಗಳು ನನಗೆ ಅವಾಚ್ಯವಾಗಿ ಬೈದು, ಕೈಯಿಂದ ಮುಷ್ಟಿ ಮಾಡಿ ಹೊಡೆದಿರುತ್ತಾರೆ. ಆಗ ವಾಹನದಲ್ಲಿದ್ದ ಕತ್ತಿಯನ್ನು ತಂದು ನಿನ್ನನ್ನು ಕಡಿದು ಸಾಯಿಸುತ್ತೇನೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ನಾನೇನಾದರೂ ಕಂಪ್ಲೇಂಟ್ ಕೊಟ್ಟರೇ ಮನೆಗೆ ನುಗ್ಗಿ ಹೊಡೆಯುತ್ತೇವೆ ಎಂದು ನನಗೆ ಹೇಳಿರುತ್ತಾರೆ ಎಂದರೆ ಸರಿ. ಬೊಲೆರೋ ವಾಹನದ ಸಂಖ್ಯೆಃ ಕೆಎ 14 ಸಿ 7379 ಆಗಿದ್ದು ನಂತರ ನನ್ನ ಅಣ್ಣ ಬಿನು ರವರಿಗೆ ಫೋನ್ ಮಾಡಿ ವಿಚಾರ ತಿಳಿಸಿ ನನ್ನನ್ನುಕರೆದುಕೊಂಡು ಹೋಗುವಂತೆ ಹೇಳಿದ್ದು ಆ ದಿನ ನಾನು ಎನ್ ಆರ್ ಪುರ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದು ನಂತರ ತಡವಾಗಿ ದೂರು ಕೊಟ್ಟಿರುತ್ತೇನೆ ಎಂದರೆ ಸರಿ.

ಪಾಟೀ ಸವಾಲುಃ  ಆರೋಪಿತರ  ಪರ ಶ್ರೀ ಕೆ ಎಸ್ ಕೆ  ವಕೀಲರಿಂದಃ

ನಮ್ಮ ಊರು ಕೆ ಕಣಬೂರು ಗ್ರಾಮ. ನಾನು ವ್ಯವಸಾಯ ಮಾಡುತ್ತಿರುತ್ತೇನೆ. ನನಗೆ ಫೋನ್ ಬಂದಾಗ ನಾನು ಕಣಬೂರು ಗೇಟಿನ ಬಳಿ ಇದ್ದೆನು. ನನಗೆ ಆ ದಿನ ಸತೀಶ ಎನ್ನುವವರು ಫೋನ್ ಮಾಡಿರುತ್ತಾರೆ. ನಾನು ಫೋನ್ ನಲ್ಲಿ ಮಾತನಾಡಿದ ನಂತರ ಸದರಿ ಫೋನ್ ಅನ್ನು ಜೇಬಿನಲ್ಲಿ ಇಟ್ಟುಕೊಂಡಿರುತ್ತೇನೆ. ಗಾಡಿಗೆ ಟಚ್ ಮಾಡಿದ ವಿಚಾರವನ್ನು ನನಗೆ ಸತೀಶ ರವರು ಹೇಳಿದ್ದು ರಾಜೇಶ ರವರು ಹೇಳಿರುವುದಿಲ್ಲ ಎಂದರೆ ಸರಿ. ಆರೋಪಿತರು ಓಮಿನಿ ವ್ಯಾನ್ ಗೆ ಟಚ್ ಮಾಡಿರುವ ಬಗ್ಗೆ ನನಗೆ  ಖುದ್ದಾಗಿ ಮಾಹಿತಿ ಇರುವುದಿಲ್ಲ ಎಂದರೆ ಸರಿ.

2. ನಾನು ಫೋನ್ ಬಂದ ನಂತರ ಕಣಬೂರಿನಿಂದ ಮುತ್ತಿನಕೊಪ್ಪದ ಕಡೆಗೆ ಬಂದಿರುತ್ತೇನೆ. ನಾನು ಆ ದಿನ ಕಣಬೂರಿನಿಂದ ನನ್ನ ಬೈಕಿನಲ್ಲಿ ಮುತ್ತಿನಕೊಪ್ಪದ ಕಡೆಗೆ ಬಂದಿರುತ್ತೇನೆ. ಆ ದಿನ ನನ್ನ ಕೈಯನ್ನು ಹಿಡಿದು ಎಳೆದ ವ್ಯಕ್ತಿ ಚಾಲಕನ ಪಕ್ಕದಲ್ಲಿ ಕುಳಿತ್ತಿದ್ದನು. ಆದರೆ ಆತನು ಈ ದಿನ ನ್ಯಾಯಾಲಯಕ್ಕೆ ಬಂದಿರುವುದಿಲ್ಲ. ಸದರಿ ವಾಹನದ ಒಳಗಿನಿಂದ ಕೈ ಹಾಕಿ ನಮ್ಮನ್ನು ಎಳೆದರೆ ಸದರಿ ವಾಹನದ ಚಾಲಕನಿಗೆ ಚಾಲನೆ ಮಾಡಲು ಆಗುವುದಿಲ್ಲ ಎಂದರೆ ಸರಿಯಲ್ಲ. ಸದರಿಯವರು ನನ್ನನ್ನು ಎಳೆದುಕೊಂಡು ಹೋಗುವಾಗ ನಾನು ಬೊಲೆರೋ ವಾಹನದ ಫುಟ್ ಬೋರ್ಡ್ ಮೇಲೆ ನಿಂತಿದ್ದೆನು. ನಾನು ಈ ರೀತಿ ಫುಟ್ ಬೋರ್ಡ್  ಮೇಲೆ ಸುಮಾರು 6 ಕಿ ಮೀ ದೂರ ಕರೆದುಕೊಂಡು ಹೋಗಿದ್ದು ನಂತರ ನಾನು ಬೊಲೆರೋ ವಾಹನದ ಮೇಲೆ ಹತ್ತಿರುತ್ತೇನೆ.

3. ಫಜೆರೋ ಹೋಟೆಲ್ ಮುಂದುಗಡೆ ಶಾಲೆ ಇರುತ್ತದೆ ಎಂದರೆ ಸರಿಯಲ್ಲ. ಫಜೆರೋ ಹೋಟೆಲ್ ಪಕ್ಕದಲ್ಲಿ ಪೆಟ್ರೋಲ್ ಬಂಕ್ ಇರುತ್ತದೆ ಎಂದರೆ ಸರಿ. ಆ ದಿನ ಫಜೆರೋ ಹೋಟೆಲ್ ನಲ್ಲಿ ಸಾಕಷ್ಟು ಜನ ಇದ್ದರು ಎಂದರೆ ಸಾಕ್ಷಿ ಫಜೆರೋ ಹೋಟೆಲ್ ನ ಮಾಲೀಕರಾದ ಗಂಡ-ಹೆಂಡತಿ ಇದ್ದರು ಎಂದು ಉತ್ತರಿಸಿರುತ್ತಾರೆ. ಸದರಿ ಫಜೆರೋ ಹೋಟೆಲ್ ಮಾಲೀಕರು ನನ್ನ ಹಿಂದೆ ಬಂದಿರುತ್ತಾರೆ ಎಂಬ ಬಗ್ಗೆ ದೂರಿನಲ್ಲಿಯಾಗಲೀ ಮತ್ತು ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ. ಸದರಿಯವರು ಪೊಲೀಸರಿಗೆ ಘಟನೆಯ ಬಗ್ಗೆ ತಿಳಿಸಿಲ್ಲ ಎಂದರೆ ಸಾಕ್ಷಿ ಹೇಳಿರುತ್ತಾರೆ ಎಂದು ಉತ್ತರಿಸಿರುತ್ತಾರೆ. ನಾನು ಕೊರಲಕೊಪ್ಪದ ಬಳಿ ಬೊಲೆರೋ ವಾಹನದ ಮೇಲೆ ಹತ್ತಿರುತ್ತೇನೆ. ಕೊರಲಕೊಪ್ಪ ಆದ ನಂತರ ಕಣಬೂರು ಬರುತ್ತದೆ ಎಂದರೆ ಸಾಕ್ಷಿ ಕಣಬೂರು ಆದ ನಂತರ ಕೊರಲಕೊಪ್ಪ ಬರುತ್ತದೆ ಎಂದು ಉತ್ತರಿಸಿರುತ್ತಾರೆ. ನಾನು ಸದರಿ ಬೊಲೆರೋ ವಾಹನ ಹತ್ತಿದ ಮೇಲೂ ನನ್ನ ಮೊಬೈಲ್ ನನ್ನ ಬಳಿ ಇತ್ತು ಎಂದರೆ ಸರಿ. ನಾನು ಸದರಿ ಬೊಲೆರೋ ವಾಹನ ಹತ್ತಿದ ನಂತರ ಪೋಲೀಸ್ ರವರಿಗಾಗಲೀ ಅಥವಾ ಸಂಬಂಧಿಕರಿಗಾಗಲೀ ಪೋನು ಮಾಡಿಲ್ಲ ಎಂದರೆ ಸಾಕ್ಷಿ ಸತೀಶ ರವರಿಗೆ ಹೇಳಿರುತ್ತೇನೆ ಎಂದು ಉತ್ತರಿಸಿರುತ್ತಾರೆ. ಸದರಿ ಈ ವಿಚಾರವನ್ನು ನಾನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ಸರಿ.

4. ಆ ದಿನ ನನ್ನನ್ನು ಭದ್ರಾವತಿಗೆ ಕರೆದುಕೊಂಡು ಹೋಗಬೇಕಾದರೆ ಉಂಬ್ಳೆ ಬೈಲು ದಾಟಿ ಹೋಗಬೇಕು ಎಂದರೆ ಸರಿ. ಉಂಬ್ಳೆ ಬೈಲು ಬಳಿ ಫಾರೆಸ್ಟ್ ಚೆಕ್ ಪೋಸ್ಟ್ ಇರುತ್ತದೆ ಎಂದರೆ ಸರಿ. ಸದರಿ ಚೆಕ್ ಪೋಸ್ಟ್ ಬಳಿ ಅರಣ್ಯ ಅಧಿಕಾರಿಗಳು ಇರುತ್ತಾರೆ ಎಂದರೆ ಸರಿ. ಸದರಿ ಚೆಕ್ ಪೋಸ್ಟ್ ಬಳಿ ರೋಡ್ ಹಂಪ್ ಗಳು ಇರುತ್ತದೆ ಎಂದರೆ ಸರಿ. ಸದರಿ ಚೆಕ್ ಪೋಸ್ಟ್ ಬಳಿ ಯಾವುದೇ ವಾಹನ ಬಂದರೂ ನಿಧಾನವಾಗಿ ಬರುತ್ತವೆ ಎಂದರೆ ಸಾಕ್ಷಿ ಈ ವಾಹನ 100 ಕಿ ಮೀ ವೇಗದಲ್ಲಿತ್ತು ಎಂದು ಉತ್ತರಿಸಿರುತ್ತಾರೆ. ಸದರಿ ಬೊಲೆರೋ ವಾಹನ ಹಳದಿ ಬಣ್ಣದ ಬೊರ್ಡ್ ಹೊಂದಿದ್ದು ಅದು 80 ಕಿ ಮೀ ಗಿಂತ ಹೆಚ್ಚಿನ ವೇಗದಲ್ಲಿ ಹೋಗಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಉಂಬ್ಳೆ ಬೈಲು ಬಳಿ ಕೂಗಿಕೊಳ್ಳುವುದು ಮಾಡಿಲ್ಲ ಎಂದರೆ ಸಾಕ್ಷಿ ನಾನು ಪೊಲೀಸರಿಗೆ ಕೇಳಿಕೊಂಡಿರುತ್ತೇನೆ ಎಂದು ಉತ್ಸರಿಸಿರುತ್ತಾರೆ. ಅಲ್ಲಿದ್ದ ಸಾರ್ವಜನಿಕರಾಗಲೀ ಪೊಲೀಸರಿಗೆ ಪೋನು ಮಾಡುವುದು ಮಾಡಿರುವುದಿಲ್ಲ ಎಂದರೆ ಸರಿ. ಸದರಿ ಚೆಕ್ ಪೋಸ್ಟ ನಂತರ ಉಂಬ್ಳೆ ಬೈಲು ಊರು ಬರುತ್ತದೆ ಎಂದರೆ ಸರಿ.

5. ಉಂಬ್ಳೆ ಬೈಲಿನ ಬಳಿ ಭದ್ರಾವತಿ ಕಡೆಗೆ ಹೋಗುವ ರಸ್ತೆಯ ಎಡಭಾಗಕ್ಕೆ ಪೊಲೀಸ್ ಚೌಕಿ ಇರುತ್ತದೆ ಎಂದರೆ ಸರಿ. ನಾನು ಅಲ್ಲಿಯೂ ಸಹ ಸಹಾಯ ಮಾಡುವಂತೆ ಕೂಗಿಲ್ಲ ಎಂದರೆ ಸರಿಯಲ್ಲ. ನಂತರ ಭದ್ರಾವತಿಗೆ ಹೋಗುವಾಗ ಒಂದು ಜಂಕ್ಷನ್ ಇರುತ್ತದೆ ಎಂದರೆ ಸರಿ. ಸದರಿ ಜಂಕ್ಷನ್ ಗೆ ಹೋಗುವಾಗ 90 ಡಿಗ್ರಿಯಲ್ಲಿ ಟರ್ನ್ ಇರುತ್ತದೆ ಎಂದರೆ ಸರಿ. ಸದರಿ ಸ್ಥಳದ ಬಳಿ ರಸ್ತೆಯ ಹಂಪ್ ಗಳು ಇರುತ್ತವೆ ಎಂದರೆ ಸರಿ. ಸದರಿ ಜಂಕ್ಷನ್ ಬಳಿ ಸುಮಾರು ಅಂಗಡಿಗಳು ಇವೆ ಎಂದರೆ ಸರಿ. ಸದರಿ ಜಂಕ್ಷನ್ ಬಳಿ ಸಾಕಷ್ಟು ಜನ ಇರುತ್ತಾರೆ ಎಂದರೆ ಸರಿ. ಸದರಿ ಜಂಕ್ಷನ್ ಬಳಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಈ ರೀತಿ ಜಂಕ್ಷನ್ ಇರುವ ಕಾರಣ ವಾಹನ ಚಾಲಕನು ನಿಧಾನವಾಗಿ ಚಾಲನೆ ಮಾಡಿಕೊಂಡು ಹೋಗಬೇಕು ಎಂದರೆ ಸರಿ.

6. ಆ ದಿನ ಬೊಲೆರೋ ಚಾಲಕನು ಯಾರಿಗೆ ಫೋನ್ ಮಾಡಿ ಬರುವಂತೆ ಹೇಳಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನನ್ನ ಅಣ್ಣ ಸದರಿ ಫ್ಲೈ ಓವರ್ ಬ್ರಿಡ್ಜ್ ಕೆಳಗೆ ಬರುವ ಸಮಯಕ್ಕೆ ಬೊಲೆರೋ ಚಾಲಕನನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ನಾನು ಆ ದಿನ ಈ ಘಟನೆಯ ಕುರಿತು ಭದ್ರಾವತಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುವುದಿಲ್ಲ ಹಾಗೂ ಭದ್ರಾವತಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲ. ನಾನು ಆ ದಿನ ಎನ್ಆರ್ ಪುರಕ್ಕೆ ಬಂದಾಗ ರಾತ್ರಿ 8.30 ಆಗಿತ್ತು. ನಾನು ಅದೇ ದಿನ ಪೊಲೀಸ್ ಠಾಣೆಗೆ ಬಂದು ದೂರು ದಾಖಲಿಸಿರುವುದಿಲ್ಲ. ನಾನು ಎನ್ ಆರ್ ಪುರ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ನಾನು ಆಸ್ಪತ್ರೆಯ ವೈದ್ಯಾಧಿಕಾರಿಗಳಿಗೆ ಘಟನೆಯ ಬಗ್ಗೆ ತಿಳಿಸಿರುತ್ತೇನೆ. ನಂತರ ಪೊಲೀಸರು ಒಂದು ಗಂಟೆಯ ನಂತರ ಆಸ್ಪತ್ರೆಗೆ ಬಂದಿರುತ್ತಾರೆ. ಆ ದಿನ ಪೊಲೀಸರು ನನ್ನ ಯಾವುದೇ ಹೇಳಿಕೆಯನ್ನು ಪಡೆದುಕೊಂಡಿರುವುದಿಲ್ಲ.

7. ನಿಪಿ 3 ರಲ್ಲಿ ಘಜೆರೋ ಹೋಟೆಲ್ ಕಾಣುವುದಿಲ್ಲ ಎಂದರೆ ಸರಿ. ನಿಪಿ 4 ರಲ್ಲಿ ಬ್ರಿಡ್ಜ್ ಕಾಣುವುದಿಲ್ಲ ಎಂದರೆ ಸರಿಯಲ್ಲ. ನಿಪಿ 6 ಭಾವಚಿತ್ರದಲ್ಲಿ ಕುರುಬನ ರಾಣಿ ಎಂದು ಬರೆದಿರುವುದಿಲ್ಲ ಎಂದರೆ ಸಾಕ್ಷಿ ಹಿಂಬದಿಯಲ್ಲಿ ಬರೆಯಲಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ಅದೇ ರೀತಿ ಸದರಿ ವಾಹನದ ಹಿಂಬದಿಯಲ್ಲಿ ಕುರುಬನ ರಾಣಿ ಎಂದು ಬರೆದಿರುವ ಬಗ್ಗೆ ಕಾಣುವುದಿಲ್ಲ ಎಂದರೆ ಸರಿ.

8. ನಿಪಿ 2 ಅನ್ನು ಕೃತ್ಯ ಸ್ಥಳದ ಬಳಿ ಬರೆದಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 2 ರಲ್ಲಿ ಬರೆದ ವಿಚಾರಗಳ

ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ನಿಪಿ 5 ಕ್ಕೆ ನಾನು ಠಾಣೆಗೆ ಹೋದಾಗ ಸಹಿ ಮಾಡಿದ್ದು ನನ್ನ ಸಮಕ್ಷಮ ಯಾವುದೇ ವಾಹನದ ಅಮಾನತ್ತು ಮಹಜರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆ ದಿನ ಆರೋಪಿತರು ನನ್ನನ್ನು ಅಕ್ರಮವಾಗಿ ಕರೆದುಕೊಂಡು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿ ಕೈ ಮುಷ್ಟಿಯಿಂದ ಹೊಟ್ಟೆಗೆ ಗುದ್ದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. 1 ನೇ ಆರೋಪಿ ಸದರಿ ಬೊಲೆರೋ ವಾಹನವನ್ನು ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಹೋಗಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿತರು ಅಪರಾದ ಮಾಡುವ ಉದ್ದೇಶದಿಂದ ಅಕ್ರಮ ಕೂಟ ಕಟ್ಟಿಕೊಂಡು ನನಗೆ ಅವಾಚ್ಯ ಶಬ್ದಗಳಿಂದ ಬೈದು, ಹೊಡೆ- ಬಡಿ ಮಾಡಿ ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆ ದಿನ ಓಮಿನಿ ವಾಹನಕ್ಕೆ ಆರೋಪಿತರು ತಮ್ಮ ವಾಹನದಿಂದ ಡಿಕ್ಕಿ ಪಡಿಸಿರುವುದಿಲ್ಲ ಹಾಗೂ ನಾನು ದೂರಿನಲ್ಲಿ ಸುಳ್ಳು ವಿಚಾರಗಳನ್ನು ನಮೂದಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ፥

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು፥ ನ.ರಾ.ಪುರ.

ಸಾಕ್ಷಿದಾರರ ಸಹಿ፥